2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 2

ಸಿ.ಡಬ್ಲ್ಯೂಃ 25

| | |
|---|---|
| ಸಾಕ್ಷಿಯ ಹೆಸರುಃ | ಕುಮಾರ. ಸುಜಲ್ ಸಂತೋಷ ಪದ್ಮಣ್ಣನವರ |
| ತಂದೆಯ ಹೆಸರುಃ | ಸಂತೋಷ ಪದ್ಮಣ್ಣನವರ |
| ವಯಸ್ಸುಃ | 15 ವರ್ಷ |
| ಉದ್ಯೋಗಃ | 10 ನೇ ತರಗತಿ ವಿದ್ಯಾರ್ಥಿ, ಲಿಟಲ್ ಸ್ಕಾಲರ್ಸ ಅಕಾಡೆಮಿ ಹೈಸ್ಕೂಲ್ |
| ವಾಸಃ | ಆಂಜನೇಯ ನಗರ, ಬೆಳಗಾವಿ. |

**ದಿನಾಂಕಃ 13.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಗೆ ಯಾವ ಕಾರಣಕ್ಕಾಗಿ ನ್ಯಾಯಾಲಯಕ್ಕೆ ಬಂದಿದ್ದೀಯಾ ಎಂದು ಕೇಳಿದ್ದಕ್ಕೆ ಆತ ನನ್ನ ತಂದೆಯ ಕೊಲೆಯ ಸಂಬಂಧ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆಂದು ಹೇಳುತ್ತಾನೆ ಹಾಗೂ ನ್ಯಾಯಾಲಯದಲ್ಲಿ ನಾವು ಸತ್ಯವನ್ನೇ ಹೇಳಬೇಕು ಇಲ್ಲದಿದ್ದರೆ ಶಿಕ್ಷೆ ಆಗುತ್ತದೆ ಎಂದು ಹೇಳುತ್ತಾನೆ. ಆತನಿಗೆ ನ್ಯಾಯಾಲಯದಲ್ಲಿ ಪ್ರಮಾಣ ವಚನದ ಉದ್ದೇಶ ತಿಳಿದಿದೆ. ಆದ್ದರಿಂದ ಆತನಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಸಂತೋಷ ಪದ್ಮಣ್ಣನವರ ನನ್ನ ತಂದೆ. ಉಮಾ ಪದ್ಮಣ್ಣನವರ ನನ್ನ ತಾಯಿ. ಆಕೆ ಈ ಪ್ರಕರಣದಲ್ಲಿ 1 ನೇ ಆರೋಪಿ. ಪ್ರಶಾಂತ ಶಿವಾನಂದ ಎಮ್ಮಿ ನನ್ನ ಮಾಮನಾಗಬೇಕು. ಆತ ಈ ಪ್ರಕರಣದ 5 ನೇ ಆರೋಪಿ. ಚಾಸಾಃ 1 ನನ್ನ ಅಕ್ಕ. ಚಾಸಾಃ 24 ಅಕುಲ ಸಂತೋಷ ಪದ್ಮಣ್ಣನವರ ನನ್ನ ತಮ್ಮ. ಚಾಸಾಃ 26 ನಮ್ಮ ದೊಡ್ಡಪ್ಪನ ಮಗ. ಚಾಸಾಃ 27 ನನ್ನ ದೊಡ್ಡಪ್ಪನಾಗಬೇಕು.

2. ಮನೆಯಲ್ಲಿ ನಾನು, ನನ್ನ ತಮ್ಮ ಅಕುಲ, ನನ್ನ ತಂದೆ ಸಂತೋಷ ಪದ್ಮಣ್ಣವರ ಹಾಗೂ ನನ್ನ ತಾಯಿ ಉಮಾ ಪದ್ಮಣ್ಣವರ ಹಾಗೂ ನನ್ನ ಅಕ್ಕ ಸಂಜನಾ ಕೂಡಿಯೇ ಇರುತ್ತಿದ್ದೇವು.

ನನ್ನ ಅಕ್ಕ ಸಂಜನಾ ಬೆಂಗಳೂರಿನಲ್ಲಿ ಕಾಲೇಜಿಗೆ ಕಲಿಯಲು ಹೋಗುತ್ತಿದ್ದಾಳೆ. ಆಕೆ ಈಗ ಇಂಜಿನಿಯರಿಂಗ್ ಪದವಿಯನ್ನು ಓದುತ್ತಿದ್ದಾಳೆ. ಸಾಕ್ಷಿಯು ಆಕೆ ಎಂ.ಎಸ್.ರಾಮಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆ ಪದವಿಯನ್ನು ಮಾಡುತ್ತಿದ್ದಾಳೆಂದು ಹೇಳುತ್ತಾನೆ.

3. ನನ್ನ ತಾಯಿ ಶೋಭಿತಗೌಡ ಅಂಕಲ್ ಜೊತೆ ಫೋನ್ ನಲ್ಲಿ ಬಹಳಷ್ಟು ಮಾತನಾಡುತ್ತಿದ್ದರಿಂದ ನನ್ನ ತಂದೆ ಹಾಗೂ ತಾಯಿಯ ನಡುವೆ ಸಾಕಷ್ಟು ಜಗಳವಾಗುತ್ತಿತ್ತು. ಈ ಬಗ್ಗೆ ನಮ್ಮ ದೊಡ್ಡಪ್ಪ ರಾಜು ದುಂಡಪ್ಪ ಪದ್ಮನ್ನವರ ಅವರಿಬ್ಬರ ನಡುವೆ ನ್ಯಾಯ ಮಾಡಿ ಹೊಂದಾಣಿಕೆ ಮಾಡಿಕೊಂಡು ಹೋಗಿ ಎಂದು ಬುದ್ಧಿವಾದ ಹೇಳುತ್ತಿದ್ದರು.

4. ಸಂತೋಷ ಪದ್ಮನ್ನವರ ನನ್ನ ತಂದೆ ಈಗ ಬದುಕಿಲ್ಲ. ದಿಃ 09.10.2024 ರಂದು ಬೆಳಗ್ಗೆ ನಾನು ಶಾಲೆಗೆ ಹೋಗಿ ಮಧ್ಯಾಹ್ನ 03.30 ರ ಸುಮಾರಿಗೆ ಮರಳಿ ಮನೆಗೆ ಬಂದೆ. ಆ ದಿನ ನನ್ನ ತಮ್ಮ ಚಾಸಾಃ 24 ರವರಿಗೆ ಹುಷಾರು ಇರಲಿಲ್ಲ ಆದ್ದರಿಂದ ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಮನೆಗೆ ಬಂದಿದ್ದರು. ನಾನು ಊಟ ಮಾಡಿ ಸಾಯಂಕಾಲ 04.30 ರ ಸುಮಾರಿಗೆ ಮಲಗಿಕೊಳ್ಳಲು ಕೋಣೆಗೆ ಹೋದೆ. ಆ ಕಾಲಕ್ಕೆ ನನ್ನ ತಾಯಿಗೆ 06.00 ಗಂಟೆಯ ಸುಮಾರಿಗೆ ನನ್ನನ್ನು ನಿದ್ರೆಯಿಂದ ಏಳಿಸಿ ಕಾರಣ ನಾನು ಹೋಮ್ ವರ್ಕ್ ಮಾಡಬೇಕಾಗಿದೆ ಎಂದು ಹೇಳಿದೆ. ಆ ಕಾಲಕ್ಕೆ ನನ್ನ ತಮ್ಮ ಚಾಸಾಃ 24 ನನ್ನ ತಂದೆಯ ಕೋಣೆಯಲ್ಲಿ ನನ್ನ ತಂದೆಯ ಜೊತೆ ಕುಳಿತಿದ್ದ. ನಂತರ ನಾನು ನನ್ನ ಕೋಣೆಗೆ ಹೋಗಿ ಮಲಗಿಕೊಂಡೆ. ಆದರೆ 07.30 ರ ಸಮಾರಿಗೆ ನನ್ನ ತಂದೆ ಅಯ್ಯೋ ಅಯ್ಯೋ ಎಂದು ಚೀರಿದ್ದು ಕೇಳಿಸಿತು ಆ ಕಾಲಕ್ಕೆ ನನ್ನ ತಮ್ಮ ನನ್ನ ಪಕ್ಕದಲ್ಲೇ ಮಲಗಿದ್ದ. ಆದ್ಯಾವಾಗ ಅದೇಗೆ ಬಂದು ನನ್ನ ಜೊತೆ ಮಲಗಿದ್ದ ಎಂದು ಗೊತ್ತಿಲ್ಲ. ಆಗ ನಾನು ಹಾಗೂ ನನ್ನ ತಮ್ಮ ಇಬ್ಬರಿಗೂ ಎಚ್ಚರವಾಯಿತು ಬಾಗಿಲು ತೆಗೆಯಲು ಹೋದೇವು. ಆದರೆ ಅದಕ್ಕೆ ಹೊರಗಿನಿಂದ ಯಾರೋ ಲಾಕ್ ಮಾಡಿದ್ದರು ಅದಕ್ಕೆ ನಾವು ಬಾಗಿಲನ್ನು ಬಡಿದೇವು. 2 ನಿಮಿಷಗಳ ನಂತರ ನನ್ನ ತಾಯಿ ನಮ್ಮ ಕೋಣೆಯ ಬಾಗಿಲು ತೆಗೆದು ಒಳಗೆ ಬಂದರು ಆಗ ಅವರು ಸಾಕಷ್ಟು ಬೇವರಿದ್ದರು. ಆಗ ನಮ್ಮ ಕೋಣೆಯ ಬಾಗಿಲು ಮುಚ್ಚಿದ್ದರಿಂದ ಅದು ಅಟೋಮೆಟಿಕ್ ಲಾಕ್ ಆಗಿರುತ್ತದೆ. ಆಗ ನಾನು, ನನ್ನ ತಮ್ಮ ಹಾಗೂ ನನ್ನ ತಾಯಿ ಆ ಕೋಣೆಯಲ್ಲಿದ್ದೇವು. ಆಗ ನಮ್ಮ ಮನೆಯಲ ಹಾಲ್ ನಲ್ಲಿ ಯಾರೋ ಅಂಕಲ್ ಇದ್ದರು

ಆಗ ನನ್ನ ತಾಯಿಯು ಮಂಗಳೂರಿನ ಭಾಷೆಯಲ್ಲಿ ಮಾತನಾಡಿ ಕಿಚನ್ ಬಾಗಿಲಿನ ಮೂಲಕ ಕಿಟಕಿಯ ಬಳಿ ಬಂದರೆ ನಾನು ಕೀ ಕೊಡುತ್ತೇನೆ ನಮ್ಮ ಕೋಣೆಯ ಬಾಗಿಲು ತಗಿ ಎಂದು ಹೇಳಿದರು. ಅದರಂತೆ ಆ ಕಾಲಕ್ಕೆ ಒಬ್ಬರು ನಮ್ಮ ಕೋಣೆಯ ಕಿಟಕಿ ಬಳಿ ಬಂದು ನಮ್ಮ ತಾಯಿಯಿಂದ ಕೀ ಪಡೆದು ನಮ್ಮ ರೂಮ್ ನ ಬಾಗಿಲನ್ನು ತೆಗೆದಿರುತ್ತಾರೆ. ಬಾಗಿಲು ತೆಗೆದ ವ್ಯಕ್ತಿ ಮುಖಕ್ಕೆ ಮಾಸ್ಕ, ಕೈಗೆ ಗ್ಲೌಸ್ ಹಾಗೂ ಹಳದಿ ಬಣ್ಣದ ಟಿ–ಶರ್ಟ ಧರಿಸಿದ್ದರು. ಆಗ ಆತನು ನನ್ನ ತಾಯಿಯ ಜೊತೆ ಮಾಡಲು ತನ್ನ ಮುಖಕ್ಕೆ ಹಾಕಿದ್ದ ಮಾಸ್ಕ ನ್ನು ತೆಗೆದ ಆಗ ನನ್ನ ತಮ್ಮನು ಆತನನ್ನು ನೀನು ಯಾರು ಎಂದು ಕೇಳಿದ. ಅದಕ್ಕೆ ಆತನು ನನ್ನ ಹೆಸರು ಮಹೇಶ ಎಂದು ಹೇಳಿರುತ್ತಾನೆ. ಆದರೆ ಆತ ಶೋಭಿತಗೌಡ ಆಗಿದ್ದ. ಆತನ ಫೋಟೋವನ್ನು ನಾನು ಈ ಹಿಂದೆ ನನ್ನ ತಂದೆ ತೋರಿಸಿದ್ದರಿಂದ ನನಗೆ ಗೊತ್ತು. ನನ್ನ ತಂದೆಯು ಆತನ ಫೋಟೊವನ್ನು ತೋರಿಸಿ ನೋಡು ನಿಮ್ಮ ಅಮ್ಮ ಈತನ ಜೊತೆ ಯಾವಾಗಲೂ ಫೋನ್ ನಲ್ಲಿ ಮಾತನಾಡುತ್ತಿರುತ್ತಾಳೆ ಎಂದು ಹೇಳಿದ್ದರು. ಆಗ ನನ್ನ ತಾಯಿಯು ಶೋಭಿತಗೌಡನನ್ನು ಕಳುಹಿಸಲು ಹೊರಗೆ ಹೋದರು. ಆಗ ನಾನು ಮತ್ತು ನನ್ನ ತಮ್ಮ ಹಾಲ್ ಗೆ ಬಂದೇವು. ಆಗ ಕಿಟಕಿಯನ್ನು ಕರ್ಟನ್ಸ್ ನಿಂದ ಮುಚ್ಚಿದ್ದರು. ಮನೆಯ Wifi ಸಹ ಆಪ್ ಆಗಿತ್ತು. ಸಿಸಿಟಿವಿ ಸಹ ಬಂದ್ ಆಗಿತ್ತು. ಒಂದು ಗ್ರೇ ಬಣ್ಣದ ಪಿಲ್ಲೋ ನಮ್ಮ ಮನೆಯ ಹಾಲ್ ನ ಸೋಪಾ ಮೇಲೆ ಇತ್ತು.

5. ಅಲ್ಲೇ ಸೋಪಾದ ಮೇಲೆ ಇದ್ದ ನಾನು ಹಾಗೂ ನಮ್ಮ ಅಮ್ಮ ಬಳಸುತ್ತಿದ್ದ ಮೊಬೈಲ್ ಫೋನ್ ನ್ನು ನಾನು ತೆಗೆದುಕೊಂಡೆ. ನನ್ನ ತಮ್ಮ ನನ್ನ ತಂದೆ ಮಲಗಿದ್ದ ರೂಮ್ ಗೆ ಹೋದ ಅಲ್ಲಿ ನನ್ನ ತಂದೆ ಅಂಗಾತ ಮಲಗಿದ್ದರು, ಅವರ ನಾಲಿಗೆ ಹೊರಗೆ ಬಂದಿತ್ತು. ಬೆಡ್ ಶೀಟ್ ಅಸ್ತವ್ಯಸ್ಥವಾಗಿತ್ತು. ಆಗ ನನ್ನ ತಮ್ಮನ್ನು ನನ್ನ ತಂದೆಯ ಕಾಲನ್ನು ಹಿಡಿದು ಏಳಿಸಲು ಪ್ರಯತ್ನಿಸಿದ ಆದರೆ ಅವರು ಏಳಲಿಲ್ಲ. ಆಗ ಆ ಕೋಣೆಯಲ್ಲಿದ್ದ ಬಾತ್ ರೂಮ್ ನಿಂದ ನೀರು ತಂದು ನನ್ನ ತಂದೆಯ ಮುಖದ ಮೇಲೆ ಹಾಕಲು ಹೋದ ಆಗ ನನ್ನ ತಾಯಿ ಬಂದು ನಿಮ್ಮ ತಂದೆ ಸಾರಾಯಿ ಕುಡಿದು ಮಲಗಿದ್ದಾರೆ ಮುಖಕ್ಕೆ ನೀರು ಹಾಕಿದರೆ ಅವರಿಗೆ ಎದೆಉರಿ ಬರುತ್ತದೆ ಆ ರೀತಿ ಮಾಡಬೇಡಿ ಎಂದು ಹೇಳುತ್ತಾರೆ.

6. ಆ ನಂತರ ನನ್ನ ತಾಯಿ ನನ್ನನ್ನು ಹಾಗೂ ನನ್ನ ತಮ್ಮನನ್ನು ಒಂದು ಕೋಣೆಯಲ್ಲಿ ಕೂಡಿ ಹಾಕಿ ಲಾಕ್ ಮಾಡಿದರು. ಆಗ ನಾನು ನಮ್ಮ ಮೊಬೈಲ್ ಫೋನ್ ನಿಂದ ನನ್ನ ದೊಡ್ಡಪ್ಪನ ಮಗ ವಿಶಾಲ ಚಾಸಾಃ 26 ರವರಿಗೆ ಫೋನ್ ಮಾಡಿ ನನ್ನ ತಂದೆ ಯಾಕೋ ಏಳುತ್ತಿಲ್ಲ ತಕ್ಷಣ ಮನೆಯ ಬಳಿ ಬಂದು ನೋಡು ಎಂದು ಹೇಳಿರುತ್ತೇನೆ. ಅದರಂತೆ ಆತ ಮನೆಯ ಬಳಿ ಬಂದನು. ನನ್ನ ತಾಯಿ ಮನೆಯ ಬಾಗಿಲು ತೆಗೆದರು ಆದರೆ ಆತನನ್ನು ಒಳಗೆ ಬಿಡಲಿಲ್ಲ, ನಿನ್ನ ಚಿಕ್ಕಪ್ಪ ಈಗ ಸಾರಾಯಿ ಕುಡಿದು ಮಲಗಿದ್ದಾರೆ ಆಮೇಲೆ ಬಾ ಎಂದು ಹೇಳಿ ಕಳುಹಿಸಿರುತ್ತಾರೆ. ಆಗ ಚಾಸಾಃ 26 ರವರು ನಮ್ಮ ಮನೆಯ ಕೆಳಗೆ ಹೋಗಿ ಕರೆ ಮಾಡಿ ನಿಮ್ಮ ಅಮ್ಮ ನಮ್ಮನ್ನು ಮನೆಯ ಒಳಗೆ ಬಿಡುತ್ತಿಲ್ಲ ಏನು ಮಾಡಲಿ ಎಂದು ಹೇಳಿದ ಆಗ ನಾನು ಮತ್ತು ನನ್ನ ತಮ್ಮ ಇಬ್ಬರು ಇನ್ನೊಮ್ಮೆ ನೀನು ಮನೆಯ ಬಳಿ ಬಂದು ಒಳಗೆ ಬರಲು ಪ್ರಯತ್ನಿಸು ಎಂದು ಹೇಳಿದೇವು. ಅದರಂತೆ ಆತ ಮತ್ತೇ ಮನೆಯ ಬಳಿ ಬಂದ ಆ ಕಾಲಕ್ಕೂ ಸಹ ನನ್ನ ತಾಯಿ ಮತ್ತೇ ಅದೇ ಕಾರಣ ಹೇಳಿ ಆತನನ್ನು ಒಳಗೆ ಬಿಡದೇ ಕಳುಹಿಸಿದರು. ನಂತರ ನನ್ನ ತಾಯಿ ಬಂದು ರೂಮ್ ನ ಬಾಗಿಲು ತೆಗೆದು ನಮ್ಮಲ್ಲಿದ್ದ ಮೊಬೈಲ್ ಫೋನ್ ಕಸಿದುಕೊಂಡು ನಮ್ಮನ್ನು ಕೂಡಿ ಹಾಕಿ ಹೋಗಿರುತ್ತಾರೆ. ಆದಾದ 5-10 ನಿಮಿಷದಲ್ಲಿ ನನ್ನ ತಾಯಿಯು ನನ್ನ ಅಣ್ಣ ಚಾಸಾಃ 26 ರವರಿಗೆ ಕರೆ ಮಾಡಿ ನಿಮ್ಮ ಚಿಕ್ಕಪ್ಪ ಯಾಕೋ ಮಾತನಾಡುತ್ತಿಲ್ಲ ತಕ್ಷಣ ಡಾಕ್ಟರ್ ಕುಲಕರ್ಣಿ ಅಂಕಲ್ ರವರನ್ನು ಕರೆದುಕೊಂಡು ಬಾ ಎಂದು ಹೇಳಿದರು. ಅವರು ಬರುವ 5-10 ನಿಮಿಷದ ಮುಂಚೆ ನನ್ನ ತಾಯಿ ಕೋಣೆಯ ಬಾಗಿಲು ತೆಗೆದು ನಮ್ಮನ್ನು ಹಾಲ್ ನ ಸೋಪಾ ಮೇಲೆ ಕುಳಿತುಕೊಳ್ಳಲು ಹೇಳಿದರು ಅದರಂತೆ ಕುಳಿತುಕೊಂಡೇವು. ನನ್ನ ಅಣ್ಣ ಚಾಸಾಃ 26 ಡಾಃ ಕುಲಕರ್ಣಿ ಅವರನ್ನು ಕರೆದುಕೊಂಡು ಬಂದ. ಆಗ ನನ್ನ ತಾಯಿಯು ಚಾಸಾಃ 26 ರವರನ್ನು ನೀನು ಸಹ ಇಲ್ಲೇ ಸೋಪಾದ ಮೇಲೆ ಕುಳಿತುಕೋ ನಾನು ವೈದ್ಯರನ್ನು ಕರೆದುಕೊಂಡು ನಿಮ್ಮ ಚಿಕ್ಕಪ್ಪನಿಗೆ ಏನಾಗಿದೆ ಎಂದು ಪರೀಕ್ಷಿಸುತ್ತೇವೆ ಎಂದು ಹೇಳಿದರು. ಆಗ ವೈಧ್ಯರು ನನ್ನ ತಂದೆಯನ್ನು ಪರೀಕ್ಷಿಸಿ ಅವರು ಮರಣ ಹೊಂದಿದ್ದಾರೆ ಎಂದು ಹೇಳಿದರು. ಆಗ ನನ್ನ ತಮ್ಮನು ನನ್ನ ಅಕ್ಕನಿಗೆ ಕರೆ ಮಾಡಿ ಅಪ್ಪ ಸತ್ತು ಹೋಗಿದ್ದಾರೆ ನೀನು ತಕ್ಷಣ ಬಾ ಎಂದು ಹೇಳಿದರು. ಆಗ ಉಳಿದ ಸಂಬಂಧಿಕರು ನನ್ನ ತಮ್ಮ ಕರೆ ಮಾಡಿ ಹೇಳಿದ. ಆ ಕಾಲಕ್ಕೆ ನನ್ನ ದೊಡ್ಡಪ್ಪ ಚಾಸಾಃ 27, ನನ್ನ ಅಣ್ಣ ಚಾಸಾಃ 26 ಹಾಗೂ ಉಳಿದ ಸಂಬಂಧಿಕರು ಬಂದು ನನ್ನ ತಂದೆಯನ್ನು ನಮ್ಮ ಕಾರಿನಲ್ಲೇ ಆಸ್ಪತ್ರೆಗೆ ತೆಗೆದುಕೊಂಡು ಹೋದರು.

7. ಆಗ ಮನೆಯಲ್ಲಿ ನಾನು, ನನ್ನ ತಮ್ಮ ಹಾಗೂ ಅಮ್ಮ ಮೂರು ಜನ ಇದ್ದೇವು. ಆಗ ನಾನು ನನ್ನ ಅಮ್ಮನಿಗೆ ಯಾಕೆ ಅಪ್ಪ ಹಾಗೆ ಕೂಗಾಡುತ್ತಿದ್ದರು ಎಂದು ಕೇಳಿದೆ. ಆಗ ನನ್ನ ಅಮ್ಮ ನಿಮ್ಮ ತಂದೆ ಯಾಕೋ ಏಳುತ್ತಿರಲಿಲ್ಲ ಆ ಕಾರಣಕ್ಕಾಗಿ ನಿಮ್ಮ ಪ್ರಶಾಂತ ಮಾಮಾ ಬಂದು ನಿಮ್ಮ ತಂದೆಗೆ ಎಲೆಕ್ಟ್ರಿಕ್ ಶಾಕ್ ಕೊಟ್ಟರು ಆ ಕಾಲಕ್ಕೆ ಹಾಗೆ ಕೂಗಿಕೊಂಡರು ಎಂದು ಹೇಳಿದರು. ಮರುದಿನ ಬೆಳಗ್ಗೆ ನನ್ನ ಅಕ್ಕ ಬೆಳಗಾವಿಗೆ ಬಂದರು. ಆ ನಂತರ ನಮ್ಮ ತಂದೆಯ ಶವವನ್ನು ಮಣ್ಣು ಮಾಡಿ ಬಂದೇವು. ಆಗ ನನ್ನ ಅಕ್ಕ ನಮ್ಮ ಮನೆಯ ಸಿಸಿಟಿವಿ ಪುಟೇಜ್ ನ್ನು ಪರೀಕ್ಷಿಸಲು ಹೋದಳು ಆಗ ನಮ್ಮ ಅಮ್ಮ ಆಕೆಯನ್ನು ತಡೆದು ಈಗ ತಾನೇ ನಿಮ್ಮ ತಂದೆಯನ್ನು ಮಣ್ಣು ಮಾಡಿ ಬಂದಿದ್ದೇ ಹೋಗಿ ಜಳಕ ಮಾಡಿ ಬಾ ಎಂದು ಹೇಳಿದರು. ಅದರಂತೆ ಹೋದಳು. ಆ ಕಾಲಕ್ಕೆ ನಾನು ಹಾಗೂ ನನ್ನ ತಮ್ಮ ಮತ್ತೊಂದು ಬಾತ್ ರೂಮ್ ನಲ್ಲಿ ಸ್ನಾನ ಮಾಡಲು ಹೋದೇವು. ನಾನು ಬೇಗ ಜಳಕ ಮುಗಿಸಿ ಹೊರಗೆ ಬಂದೆ. ಆಗ ನನ್ನ ತಾಯಿಯು ಸಂಬಂಧಿಕರು ಬಂದವರೆಲ್ಲಾ ಸಿಸಿಟಿವಿ ಪುಜೇಟನ್ನು ತೋರಿಸಿ ಎಂದು ತೊಂದರೆ ಕೊಡುತ್ತಾರೆ ಅದನ್ನು ಅಳಿಸಿ ಹಾಕು ಎಂದು ಹೇಳಿರುತ್ತಾರೆ. ಅದರಂತೆ ನಾನು ಪುಟೇಜನ್ನು ಅಳಿಸಿ ಹಾಕಿದೆ. ಆ ನಂತರ ನನ್ನ ಅಕ್ಕ ಜಳಕ ಮುಗಿಸಿ ಸಿಸಿಟಿವಿ ಪುಟೇಜನ್ನು ಪರೀಕ್ಷಿಸಲು ಪ್ರಯತ್ನಿಸಿದಳು ಆದರೆ ಅವುಗಳೆಲ್ಲಾ ಅಳಿಸಿ ಹೋಗಿದ್ದವು. ಆಗ ಆಕೆಯು ನನ್ನ ತಾಯಿಯನ್ನು ಯಾಕೆ ಸಿಸಿಟಿವಿ ಪುಟೇಜಗಳೆಲ್ಲಾ ಡಿಲಿಟ್ ಆಗಿವೆ ಎಂದು ಕೇಳಿದಳು ಅದಕ್ಕೆ ನನ್ನ ಅಮ್ಮನು ಸುಜಲ್ ನು ಸಿಸಿಟಿವಿಯನ್ನು ನೋಡುವ ಕಾಲಕ್ಕೆ ಆಕಸ್ಮಿಕವಾಗಿ ಡಿಲಿಟ್ ಮಾಡಿರುತ್ತಾನೆ ಎಂದು ಹೇಳಿದರು. ಆಗ ನನ್ನ ಅಕ್ಕ ನನ್ನ ಬಳಿ ಬಂದು ಯಾಕೆ ನೀನು ಸಿಸಿಟಿಳಿ ಪುಟೇಜ್ ನ್ನು ಡಿಲಿಟ್ ಮಾಡಿದೆ ಎಂದು ಕೇಳಿದರು. ಅದಕ್ಕೆ ನಾನು ಅಮ್ಮನೇ ಸಂಬಂಧಿಕರೆಲ್ಲಾ ಬಂದು ಸಿಸಿಟಿವಿ ಪುಟೇಜನ್ನು ತೋರಿಸು ಎಂದು ಕಾಡುತ್ತಾರೆ ಆ ಕಾರಣಕ್ಕಾಗಿ ಅದನ್ನು ಡಿಲಿಟ್ ಮಾಡು ಎಂದು ಹೇಳಿದ್ದರಿಂದ ನಾನೇ ಡಿಲಿಟ್ ಮಾಡಿದೆ ಎಂದು ಹೇಳಿದೆ.

8. ಆ ದಿನ ನಮ್ಮ ತಂದೆಯನ್ನು ಮಣ್ಣು ಮಾಡಿ ಬಂದ ನಂತರ ರಾತ್ರಿ ನಮ್ಮ ಜೊತೆ ಮಲಗಲು ನಮ್ಮ ದೊಡ್ಡಪ್ಪಂದಿರ ಮಕ್ಕಳುಗಳಾದ ವಿಶಾಲ ಮತ್ತು ಶ್ರೇಯಸ ಮನೆಗೆ ಬಂದಿದ್ದರು. ಶ್ರೇಯಸ್ ಹಾಲ್ ನಲ್ಲಿ ಕುಳಿತಿದ್ದ. ನಾನು, ನನ್ನ ತಮ್ಮ ಚಾಸಾಃ 24, ನನ್ನ ಅಕ್ಕ ಚಾಸಾಃ 1, ನನ್ನ ದೊಡ್ಡಪ್ಪನ ಮಗ ಚಾಸಾಃ 26 ವಿಶಾಲ ಕೋಣೆಯಲ್ಲಿ ಕುಳಿತಿದ್ದೇವು. ಆ ಕಾಲಕ್ಕೆ ಆ ಹಿಂದಿನ ದಿನ ಮನೆಯಲ್ಲಿ ಏನೇನು ಆಯಿತು ಎಂದು ಹೇಳಿದೇವು. ಆ ನಂತರ

ನನ್ನ ಅಕ್ಕನು ಈ ಎಲ್ಲಾ ವಿಚಾರಗಳನ್ನು ನನ್ನ ದೊಡ್ಡಪ್ಪ ಚಾಸಾಃ 27 ರಾಜು ದುಂಡಪ್ಪಾ ಪದ್ಮಣ್ಣನವರ ಬಳಿ ಹೇಳಿದಳು. ಆಗ ನನ್ನ ತಂದೆಯ ಕೊಲೆಯ ವಿಚಾರದಲ್ಲಿ ನನ್ನ ತಾಯಿ, ಶೋಭಿತಗೌಡ ಹಾಗೂ ಪವನ ಕೈವಾಡ ಇರಬಹುದು ಎಂದು ಹೇಳಿ ನನ್ನ ಅಕ್ಕ ಪೋಲೀಸ್ ಠಾಣೆಯಲ್ಲಿ ದೂರು ನೀಡಿದಳು ಎಂದು ಹೇಳುತ್ತಾರೆ. ಸಾಕ್ಷಿಯು ಈ ಹಂತದಲ್ಲಿ ದಿಃ 09.10.2024 ರಲ್ಲಿ ನಾನು, ನನ್ನ ತಾಯಿ ಹಾಗೂ ನನ್ನ ತಮ್ಮ ಕೋಣೆಯಲ್ಲಿದ್ದಾಗ ಶೋಭಿತಗೌಡನು ಬಂದು ನಮ್ಮ ಕೋಣೆಯ ಬಾಗಿಲು ತೆಗೆದಾಗ ಪವನನು ನಮ್ಮ ಹಾಲ್ ನ ಸೋಪಾದ ಮೇಲೆ ಕುಳಿತಿದ್ದ. ಪವನನ ಪೋಟೋವನ್ನು ಸಹ ನನ್ನ ತಂದೆ ನನಗೆ ಈ ಹಿಂದೆ ತೋರಿಸಿದ್ದರು ಕಾರಣ ನನ್ನ ತಾಯಿ 2-3 ಬಾರಿ ಆತನಿಗೆ ಕರೆ ಮಾಡಿದ್ದನ್ನ ನನ್ನ ತಂದೆ ನನಗೆ ತೋರಿಸಿದ್ದರು.

9. ದಿಃ 17.10.2024 ರಂದು ಮಾಳಮಾರುತಿ ಪೋಲೀಸ್ ಠಾಣಣೆಯ ಪೋಲೀಸ್ ಇನ್ಸಪೆಕ್ಟರ್ ಕಾಲಿಮಿರ್ಚಿ ರವರು ನನ್ನನ್ನು, ನನ್ನ ತಮ್ಮ, ನನ್ನ ಅಕ್ಕ ಹಾಗೂ ನನ್ನ ದೊಡ್ಡಪ್ಪ ಚಾಸಾಃ 27 ರವರನ್ನು ಪೋಲೀಸ್ ಠಾಣೆಗೆ ಕರೆಸಿದ್ದರು. ಅಲ್ಲಿ ನನ್ನ ತಾಯಿ, ಶೋಭಿತಗೌಡ ಹಾಗೂ ಪವನ ಇದ್ದರು. ಆ ಕಾಲಕ್ಕೆ ಪೋಲೀಸರು ಈ ಮೂವರು ಹಾಗೂ ಮತ್ತೊಬ್ಬ ಮಂಜುನಾಥ ಸೇರಿ ನನ್ನ ತಂದೆಯನ್ನು ಕೊಲೆ ಮಾಡಿದ್ದಾರೆ ಎಂದು ಹೇಳಿದರು. ಆಗ ನಾನು ಸಹ ದಿಃ 09.10.2024 ರ ರಾತ್ರಿ ನನ್ನ ಕೋಣೆ ಲಾಕ್ ಆಗಿದ್ದಾಗ ನನ್ನ ತಾಯಿಯಿಂದ ಕೀ ಪಡೆದು ನಮ್ಮ ಕೋಣೆಯ ಬಾಗಿಲನ್ನು ಶೋಭಿತಗೌಡ ತೆಗೆದಿದ್ದ ಎಂದು ನಾನು ಗುರುತಿಸಿ ಹೇಳಿರುತ್ತೇನೆ. ಆ ಕಾಲಕ್ಕೆ ಪವನನ್ನು ಸಹ ಗುರುತಿಸಿ ಶೋಭಿತಗೌಡನು ನಮ್ಮ ಕೋಣೆಯ ಕೀಯನ್ನು ತೆಗೆದಾಗ ಪವನ ನಮ್ಮ ಮನೆಯ ಹಾಲ್ ನ ಸೋಪಾ ಮೇಲೆ ಕುಳಿತಿದ್ದ ಎಂದು ಸಹ ಗುರುತಿಸಿರುತ್ತೇನೆ.

10. ದಿಃ 19.10.2024 ರಂದು ನಮ್ಮನ್ನು ಮತ್ತೇ ಪೋಲೀಸ್ ಠಾಣೆಗೆ ಕರೆಸಿದ್ದರು ಆಗ ಅಲ್ಲಿ ಮಂಜುನಾಥ ಎಂಬಾತನನ್ನು ತೋರಿಸಿ ಈತನೇ ದಿಃ 09.10.2024ರಂದು ನಿಮ್ಮ ಮನೆಗೆ ಬಂದು ನಿಮ್ಮ ತಂದೆಗೆ ನಿದ್ರೆ ಮಾತ್ರೆ ನೀಡಿ ಇಂಜೆಕ್ಷನ್ ಹೊಡೆಯಲು ಪ್ರಯತ್ನಿಸಿದ್ದು ಎಂದು ಹೇಳಿರುತ್ತಾರೆ. ದಿಃ 26.10.2024 ರಂದು ನಮಗೆ ನ್ಯಾಯಾಲಯದಿಂದ ನೋಟೀಸ್ ಬಂದಿತ್ತು. ಆಗ ನಾನು, ನನ್ನ ತಮ್ಮ ಚಾಸಾಃ 24, ನನ್ನ ಅಕ್ಕ ಚಾಸಾಃ 1, ನನ್ನ

ದೊಡ್ಡಪ್ಪ ಚಾಸಾಃ 27 ರವರು ನ್ಯಾಯಾಲಯಕ್ಕೆ ಹೋದೇವು. ಆಗ ನ್ಯಾಯಾಧೀಶರು ಏನು ಆಗಿದೆ ಎಂದು ಕೇಳಿರುತ್ತಾರೆ ಆಗ ನಾನು ನನಗೆ ತಿಳಿದಿದ್ದ ಎಲ್ಲಾ ವಿಚಾರಗಳನ್ನು ಹೇಳಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ನಾನು ನ್ಯಾಯಾಧೀಶರ ಮುಂದೆ ಹೇಳಿದ ಹೇಳಿಕೆ ಎಂದು ಹಾಗೂ ಅದರಲ್ಲಿ ತನ್ನ ಸಹಿಗಳು ಇವೆ ಎಂದು ಗುರುತಿಸಿದ್ದರಿಂದ ಅದನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 2(ಎ), 2(ಬಿ), 2(ಸಿ) ಮತ್ತು 2(ಡಿ) ಎಂದು ಗುರುತಿಸಲಾಯಿತು.

11. ಸಾಕ್ಷಿಯು ಈಗ ವಿ.ಸಿ. ಮೂಲಕ ಹಾಜರಾಗಿರುವ ಒಬ್ಬ ಆರೋಪಿಯನ್ನು ನೋಡಿ ಈತ ನನ್ನ ಮಾಮ ಪ್ರಶಾಂತ ಎಂದು ಗುರುತಿಸಿರುತ್ತಾರೆ ಆತ ಈ ಪ್ರಕರಣದ 5 ನೇ ಆರೋಪಿಯಾಗಿರುತ್ತಾರೆ. ಸಾಕ್ಷಿಯು ಒಬ್ಬ ಮಹಿಳೆಯನ್ನು ನೋಡಿ ಈಕೆ ನನ್ನ ತಾಯಿ ಉಮಾ ಎಂದು ಗುರುತಿಸುತ್ತಾರೆ. ಸಾಕ್ಷಿಯು ಮತ್ತೊಬ್ಬ ಆರೋಪಿಯನ್ನು ನೋಡಿ ಈ ಶೋಭಿತಗೌಡ ಎಂದು ಗುರುತಿಸುತ್ತಾರೆ. ಆತ ಈ ಪ್ರಕರಣದ 2 ನೇ ಆರೋಪಿಯಾಗಿರುತ್ತಾನೆ. ಸಾಕ್ಷಿಯು ಮತ್ತೊಬ್ಬ ಆರೋಪಿಯನ್ನು ನೋಡಿ ಈತ ಪವನ ಎಂದು ಗುರುತಿಸುತ್ತಾರೆ. ಆತ ಈ ಪ್ರಕರಣದಲ್ಲಿ 3 ನೇ ಆರೋಪಿಯಾಗಿರುತ್ತಾನೆ. ಸಾಕ್ಷಿಯು ಮತ್ತೊಬ್ಬ ಆರೋಪಿಯನ್ನು ನೋಡಿ ಈತ ಮಂಜುನಾಥ ಎಂದು ಗುರುತಿಸುತ್ತಾರೆ. ಆತ ಈ ಪ್ರಕರಣದಲ್ಲಿ 4 ನೇ ಆರೋಪಿಯಾಗಿರುತ್ತಾನೆ.

12. ಸಾಕ್ಷಿಯು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಾದ ಪಿಲ್ಲೋ ಹಾಗೂ ಅದರ ಕವರ್ ನ್ನು ನೋಡಿ ಇದೇ ಪಿಲ್ಲೋ ಕವರ್ ನೊಂದಿಗೆ ದಿಃ 09.10.2024 ರಂದು ನಮ್ಮ ಮನೆಯ ಹಾಲ್ ನಲ್ಲಿ ಇದ್ದದ್ದು ಎಂದು ಗುರುತಿಸುತ್ತಾರೆ.

**ಪಾಟೀ ಸವಾಲುಃ 1 ರಿಂದ 5 ನೇ ಆರೋಪಿತರ ಪರ ಶ್ರೀ. ಆರ್.ಸಿ.ಪಿ. ವಕೀಲರಿಂದಃ**

ಆರೋಪಿ ಪರ ವಕೀಲರು ತಮ್ಮ ಹಿರಿಯ ವಕೀಲರಿಗೆ ಗಂಟಲು ಸಂಬಂಧಿತ ಸಮಸ್ಯೆ ಇರುವುದರಿಂದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಆರೋಪಿತರ ಪರ ವಕೀಲರಿಗೆ ಯಾವುದಾದರೂ ಆರೋಗ್ಯ ಸಮಸ್ಯೆ ಇರುವುದರ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ, ಆದರೂ ಸಹಿತ ನೈಸರ್ಗಿಕ ನ್ಯಾಯದ ದೃಷ್ಟಿಯಿಂದ ಆರೋಪಿತರಿಗೆ

**ಅವಕಾಶ ಕೊಡುವ ಉದ್ದೇಶದಿಂದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

**ಓ ಹೇ ಕೇ ಸರಿ ಇದೆ.**

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.